# ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಿ.ಸಿ ನಂ.3984 /2018

ಸಿಡಬ್ಲ್ಯೂ: 11

ಪಿಡಬ್ಲ್ಯೂ:05

ಸಾಕ್ಷಿದಾರರ ಹೆಸರು : ಕೆಂಪಮ್ಮ

ಗಂಡನ ಹೆಸರು : ನಾರಾಯಣಪ್ಪ

ವಯಸ್ಸು : 53 ವರ್ಷ

ಉದ್ಯೋಗ : ಪಿ.ಎಸ್.ಐ

ವಾಸಸ್ಥಳ : ಬೆಂಗಳೂರು

ದಿನಾಂಕ: 23.11.2024 ರಂದು ಪ್ರಮಾಣ ಮಾಡಿಸಲಾಯಿತು.

## ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದ

2016 ರಿಂದ 2021 ರವರೆಗೆ ನಾನು ವೈಟ್‌ಫೀಲ್ಡ್ ಪೋಲಿಸ ಠಾಣೆಯಲ್ಲಿ ಎ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03.02.2017 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ಇವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆದಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು, ಪ್ರ.ವ.ವ ವರದಿಯನ್ನು ತಯಾರಿಸಿರುತ್ತೇನೆ. ದೂರನ್ನು ಈಗಾಗಲೇ ನಿಪಿ.1 ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ.1ಬಿ ಎಂದು, ಪ್ರ.ವ.ವ ಅನ್ನು ನಿಪಿ.10 ಎಂದು ಸಾಕ್ಷಿ ಸಹಿಯನ್ನು ನಿಪಿ.10ಎ ಎಂದು ಗುರುತಿಸಲಾಯಿತು. ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾಸಾ.1 ಇವರು ತೋರಿಸಿದ

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-5.pdf

ಸ್ಥಳದಲ್ಲಿ ಪಂಚರಾದ ಚಾಸಾ.5 ಮತ್ತು 6 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ.9 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ.9ಬಿ ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಚಾಸಾ.12 ರವರಿಗೆ ನೀಡಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>**

ಚಾಸಾ 5 ಮತ್ತು 6 ರವರು ಹೊಪ್ ಪಾರ್ಮ ಪ್ರದೇಶದ ನಿವಾಸಿಗಳಲ್ಲ ಎಂದರೆ ಸರಿ. ಪಂಚರಿಗೆ ಲಿಖಿತ ನೋಟಿಸ್ ನಾನು ಕೊಟ್ಟಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಸ್ಥಳದ ಸುತ್ತ ಮುತ್ತಲು ಸಿಸಿಟಿವಿ ಗಳು ಇದ್ದವು ಎಂದರೆ ಸರಿ. ಸ್ಥಳದಲ್ಲಿ ನಾವು ಸಿಸಿಟಿವಿ ಪುಟೇಜಗಳನ್ನು ಪಡೆದುಕೊಂಡಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಸ್ಥಳದಲ್ಲಿ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಿಸಲಾಯಿತು) ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಎ.ಸಿ.ಜೆ.ಎಂ.,ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABR040069362018/truecopy/order-5.pdf